ಎಲ್ಲನೂ ಮಾರಬುಟ್ಟು ನೀನೂ ಸಿಟಿ ಸೇರ್ಕಳ್ಳೆ ಬುಡು ಪುಟ್ಟಪ್ಪ, ನಾವೂ ತಿರ್ಗಾಡ್ಕಂಡ್ ಬತ್ತಿವಿ ಬೆಂಗಳೂರ್ ನೋಡಕ' ಅಂತಿನ್ನೊಬ್ಬ.

ಬಾಣಂತಿಯಾಗಿದ್ ನನ್ ಮುಂದಕ್ ಬಂದ್ ನಮ್ಮಮ್ಮ ಸುರು ಹಚ್ಕಂಡ್ರು. 'ತ್ವಾಟ್ದಲ್ ಕೆಲ್ಸ ಮಾಡಾ ಆಳ್ಗಳ್ ಕತಾ ಒಸ್ಕಲ್ಲ ಕಣ್ ಕುಸ್ಕ, ಆ ರಶ್ಮಿ, ಸಿವಿ ಎಲ್ಲ ನೋಡುದ್ರಂತ, 'ಯಾನಳಿ ನಿಮ್ ಮಗಳವರು ಅಂಗ್ ಕಾಣ್ತಾರಲ್ಲಳಿ, ಪುಟ್ಟಪ್ಪನವರು ಯೋಳಿದ್ರಂತ, ನಮ್ಮೈಕ ಆಕಿದ್ದೋ ನೋಡ್ದೋ ಅಳಿ, ಯಾನ ಅಷ್ಟ್ ಚೆನಾಗ್ ಕಾಣ್ತಾರಳಿ, ಅಂತಿದ್ರು ಎಲ್ಲ. ರಶ್ಮಿ ಅಂತು ಕೆಲಸ ಕೈಬುಡಾಗಂಟ ಇದೇ ಸುದ್ದಿ, 'ಯಾನಳಿ ಅಂತಂತ ದೊಡ್ ಮಿನಿಸ್ಟರುಗಳ್ ಜೊತಲೆ ಮಾತಾಡ್ತರಲ್ಲಳಿ, ಇನ್ನೇನಳಿ ನಮ್ಮೈಕಳಗ್ ಒಂದ್ ಕೆಲ್ಸ ಗಿಲ್ಸ ಬೇಕು ಅಂದ್ರ ಒಸಿ ಯೋಳ್ಸಿ ಅಳಿ, ನಿಮ್ಮಗಳ್ ಕೈಲಿ, ಅಂದ್ಲು (ನ್ಯೂಸು ಮಧ್ಯದಲ್ ಬರೋ ವಿಷುವಲ್ನ ನೋಡಿ ಆ ಸಕಲ ಮಂತ್ರಿಗಳೂ ಅಲ್ಲೆ ಪಕ್ಕದಲೇ ಇದ್ದಾರೆ ಅಂತ ನಮ್ ರಶ್ಮಿ, ಸಿವಿ ತಪ್ ತಿಳ್ಕಂಡಿದ್ರು.) ಮುಂದುವರೆಸಿದ್ರು ನಮ್ಮಮ್ಮ... 'ಹೊಲದಿಂದ ಹಟ್ಟಿಗ್ ಬರಾಗಂಟ ಉದ್ದಕ್ಕು ಮನ ಮನಲೂ ಇದೇ ಮಾತು. ಕ್ಯೋಳ್ದೋರ್ಗೆಲ್ಲ ಯೋಳಿ ಯೋಳಿ ನಂಗೂ ಸಾಕಾಗೋಯ್ತು' ಅಂತ ಮೇಲ್ನೋಟಕ್ ಅಂದ್ರೂ ಆ ಸಾಕಾಗುವಿಕೆಲೊಂಥರದ್ ಕುಸಿಯೇ ಕಾಣ್ತಿತ್ತು. ಒಟ್ನಲ್ಲಿ ಮಗಳು ಟೀವೀಲಿ ಬರೋಕ್ ಸುರುವಾದ್ಮೇಲೆ ಎತ್ತವಳಿಗೂ, ಉಟ್ಟಿಸಿದವನಿಗೂ ಒಂಥರವಾದ್ ತೂಗುವಿಕೆ ಪ್ರಾಪ್ತವಾಗೋಗಿತ್ತು.

ಹಟ್ಲಿ ಇಷ್ಟೆಲ್ಲ ದರ್ಬಾರ್ ನಡೀತಿದ್ರೂ, ಸೋಮ ಮಾತ್ರ ಈ ವಿಷಯವಾಗಿ ಒಂದೇ ಒಂದ್ ರೆಸ್ಪಾನ್ಸೂ ಕೊಟ್ಟಿರ್ಲಿಲ್ಲ. ಕೊಳ್ಳೆಗಾಲದ್ ಪಕ್ಕದ್ ಉತ್ತಂಬಳ್ಳಿಯ ಈ ಸೋಮ, ನಾಕನೇ ಕ್ಲಾಸಿಂದ ಹತ್ತರವರೆಗೂ ಸತತ ಪೇಲು. ಸದ್ಯಕ್ಕೆ ನಮ್ಮ ಕೊಟ್ಟಿಗೆ ಉಸ್ತುವಾರಿ ಸಚಿವನಾಗಿ ಬಂದಿದ್ದ. ಆಲ್ಮೋಸ್ಟು ಒಂದ್ ವಾರದಿಂದ ಮಗಳನ್ನ ಟೀವೀಲಿ ನೋಡ್ತಾ, ಒಂಥರವಾಗಿ ತೇಲ್ತಿದ್ ನಮ್ಮಪ್ಪನ ಗಮನಕ್ಕೆ, ಮೋಟ್ ಗೋಡೆ ಮೇಲ್ ಕೂತು ಟಿವಿ ನೋಡ್ತಿದ್ ಸೋಮ ಕಾಣಿಸ್ದ. 'ಏನ್ಲಾ ಸೋಮ ನೀ ಏನೂ ಏಳ್ಳೇ ಇಲ್ವಲ್ಲ,' ಅಂದ್ರು, 'ಯಾನಳಿ, ಯಾನೋಳ್ಬೇಕು' ಅಂದ ಸೋಮ.

'ಯಾನ್ಯೋಳದು ಅಂದ್ರ? ನೋಡು ಅಲ್ಲಿ, ಟಿವಿಲಿ ಬರಾದ' ಅಂತ ಒಂಥರವಾಗ್ ಅಂದ್ರು. 'ನಿನ್ನೂ ಸೇರ್ಸವಾ ನೋಡು' ಅಂತ್ ಬೇರೆ ಟಾಂಗು. 'ಏ... ಅದೂ ಒಂದ್ ಕೆಲ್ಸವಾ ಓಗಿ ಯೋಳಿ' ಅಂದ್ಬುಟ್ಟ ಸೋಮ. ಅಮ್ಮನ ಕಿವಿಯೂ ಅಲರ್ಟ್ ಆಯ್ತು. 'ಯಾನಡಾ ಸೋಮ ಇಂಗಂದ್ಬುಟ್ಟೆ? ಚೆಂದಿಲ್ವ ಈ ಕೆಲ್ಸ?' ಅಂದ್ರು, 'ಇನ್ನಾನಳಿ ಮತ್ತ? ಸುಮ್ಮನ್ ಕುಂತ್ಕಂಡು ಇಂಗಿಂಗಾಯ್ತು ಇಂಗಿಂಗಾಯ್ತು ಅಂತ್ ಯೊಳದು ಅಷ್ಟಿಯೆ, ಅದೂ ಒಂದ್ ಭಾರಿ ಕೆಲ್ಸವಾ ಯೋಳಿ?' ಅಂತ ಪ್ರಶ್ನೆ ಎಸೆದ. 'ವಾರ್ತ ವಾರ್ತ ಅನ್ನಂಡು ಐಕ ಡ್ಯಾನ್ಸ್ ಮಾಡದ್ನೂ ಆಕದ್ ಬುಟ್ಬುಟ್ರ, ಊಟಕ್ಕಿಕ್ಕ ನಿದ್ ಬತ್ತದ ಮನಿಕತ್ತಿನಿ' ಅಂತ ಆಕಳಿಸಿದ, ಪ್ರೈಮ್ ನ್ಯೂಸಿನ ಹೊತ್ತಿಗೆ ಸೋಮನಿಗೆ ಸಮಾ ಗೊರಕೆ.

ಈ ಥರವಾಗ್ ನಮ್ಮಪ್ಪಂಗಾದ್ ಮೊಖಭಂಗವ ನಾವೂ ಒಂದ್ಸಲ ಪೇಸ್ ಮಾಡಬೇಕಾಯ್ತು. ಅದ್ ಯೋಳ್ತೀನ್ ಕ್ಯೋಳಿ. ನಂಜನಗೂಡ್ ತಾಲೋಕ್ಲಿ ತಗಡೂರು ಅಂತೊಂದ್ ಊರು. (ದ್ಯಾವನೂರ್ ಪಕ್ಕದ್ದೇ) ನಮ್ಮ ದೊಡ್ ಮಾವನವರು ತೀರ್ಕೊಂಡಾಗ ಅವರ್ ಮೂರ್ ಜನ ಗಂಡ್ಮಕ್ಕಳು, ನನ್ ಗಂಡನ್ ಜೊತಲುಟ್ಟುದ್ ಮೂರ್ ಜನ ಸೊಸೇರು ಎಲ್ಲರೂ 12 ದಿನ ಅಲ್ಲೇ ಇರಬೇಕಾಯ್ತು. ಮದುವೆಯಾದ್ ಮೇಲ್ ತಗಡೂರಿಗ್ ಹೋಗಿದ್ದು ಅದು ಎರಡನೇ ಸಲವಷ್ಟೆ, ಆದ್ರೂ ನಮ್ ದೊಡ್ಮಾವ ನನ್ ಬಗ್ಗೆ ಚೆನ್ನಾಗೇ ಬಿಲ್ಡಪ್ಪು ಕೊಟ್ಟಿದ್ರು. ಅದಕ್ ಸಕಾರಣ ಏನಪ್ಪಾ ಅಂದ್ರೆ ಟೀವಿ. 'ದಾರಾವಾಯಿ ಬರಿಯವ ನೀನಿಯವ್ವಾ? ರಾಜಪ್ಪಣ್ಣನ್ ಸೊಸ? ಪಾಯಿ ಸಿದ್ದಪ್ಪಣ್ಣ ಅಟ್ಟಿಗೋದಾಗೆಲ್ಲ ಯೋಳ್ತಿದ್ರು' ಅಂತ ಬೀದಿ ಹೆಂಗಸರು ಕೇಳ್ತಿದ್ರೆ, ಸಿಕ್ಕಿದ್ ಸ್ಕೋಪ್ನ ನಾನೂ ಚೆನ್ನಾಗೇ ತಗಾತಿದ್ದೆ.

ನಮ್ಮದು ಗೊತ್ತಲ್ಲ? 'ಷೋ ಮಸ್ಟ್ ಗೋ ಆನ್' ಸೂತ್ರದ ಕೆಲಸ. ಏನೇ ಆದ್ರೂ ಓಡ್ತಿರಬೇಕು ಸೀರಿಯಲ್ಲು. ಹಂಗಾಗಿ ಅಲ್ಲೇ ಕೂತು ಬರೀಬೇಕಾಯ್ತು. ಎಲ್ ಬರಿಯೋದು? ಹಟ್ಟಿ ತುಂಬ ಜನ, ಐಕ್ಳು, ಮಕ್ಳು. ಗಜಿಬಿಜಿ, ನನ್ ಪೇಚು ಎದುರ್ಮನೆ ರತ್ನಕ್ಕನಿಗ್ ಅರ್ಥವಾಗಿ,



ಮಲೆ ಮಹದೇಶ್ವರಸ್ವಾಮಿಯ ಮಹಾರಥೋತ್ಸವ

ಚಿತ್ರ: ಜಿ. ಪ್ರದೀಪ್‌ಕುಮಾರ್



ನಿಸರ್ಗ ರಮಣೀಯ ಬಂಡೀಪುರ ಅರಣ್ಯಪ್ರದೇಶ